


ಕರ್ನಾಟಕದ ಆಟಗಾರರ ರೇಡಿಂಗ್ ಕೌಶಲ

# ಭರವಸೆಯ 'ಮ್ಯಾಟ್'ನಲ್ಲಿ ಅಂಗವಿಕಲರ ಕಬಡ್ಡಿ

**ನಾನಾ ಕಾರಣಗಳಿಂದ ಅಂಗವೈಕಲ್ಯ ಅನುಭವಿಸುತ್ತಿದ್ದರೂ ಜೀವನೋತ್ಸಾಹ ಕಳೆದುಕೊಳ್ಳದೆ ಕಬಡ್ಡಿಯಲ್ಲಿ ತೊಡಗಿಸಿಕೊಂಡಿರುವವರಿಗೆ ಭಾರತ ಪ್ಯಾರಾಲಿಂಪಿಕ್ ಫೆಡರೇಷನ್‌ನಲ್ಲಿ ಪ್ಯಾರಾ ಕಬಡ್ಡಿಯೂ ಸೇರ್ಪಡೆಗೊಂಡಿರುವುದರಿಂದ ನವಚೇತನ ದೊರಕಿದಂತಾಗಿದೆ. ಮೊತ್ತಮೊದಲ ರಾಷ್ಟ್ರೀಯ ಕಬಡ್ಡಿ ಚಾಂಪಿಯನ್‌ಷಿಪ್‌ನ ಯಶಸ್ಸಿನ ಬೆನ್ನಲ್ಲೇ ಅಂಗವಿಕಲ ಕಬಡ್ಡಿಪಟುಗಳಿಗಾಗಿ ಟೂರ್ನಿಗಳನ್ನು ಆಯೋಜಿಸಲು ಭಾರತ ಪ್ಯಾರಾ ಕಬಡ್ಡಿ ಫೆಡರೇಷನ್ ಮುಂದಾಗಿದೆ. ಒಂದೆಡೆ ಏಷ್ಯನ್ ಚಾಂಪಿಯನ್‌ಷಿಪ್ ಕುರಿತ ಮಾತುಕತೆ ನಡೆಯುತ್ತಿದ್ದರೆ ಈ ವರ್ಷದ ಸೆಪ್ಟೆಂಬರ್‌ನಲ್ಲಿ ಮಂಗಳೂರಿನಲ್ಲಿ ಫೆಡರೇಷನ್ ಕಪ್ ಟೂರ್ನಿ ಆಯೋಜಿಸಲು ಸಿದ್ಧತೆಗಳು ನಡೆಯುತ್ತಿವೆ. ಒಟ್ಟಾರೆ ಪ್ಯಾರಾ ಕಬಡ್ಡಿಯಲ್ಲಿ ಹೊಸ ಬೆಳಕು ಮೂಡಿದೆ.**

> **ನ್ಯೂನತೆಯನ್ನು ಮರೆತು ಕ್ರೀಡೆಯ ಮುಖ್ಯಧಾರೆಯಲ್ಲಿ ಸೇರಿಕೊಳ್ಳಲು ಅಂಗವಿಕಲ ಕಬಡ್ಡಿಪಟುಗಳಿಗೆ ಉತ್ತಮ ಅವಕಾಶ ಒದಗಿದೆ. ಇಂಥ ತಂಡದ ಜೊತೆ ಇರುವುದು ದೇವತಾ ಕಾರ್ಯ ಎಂದೇ ಭಾವಿಸಿದ್ದೇನೆ.**
>
> –ಗೋಪಿನಾಥ್,
> ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ
> ಕರ್ನಾಟಕ ತಂಡದ ವ್ಯವಸ್ಥಾಪಕ



■ **ವಿಕ್ರಂ ಕಾಂತಿಕೆರೆ**

ವಿಜಯಪುರ ಜಿಲ್ಲೆ ಮುದ್ದೇಬಿಹಾಳ ತಾಲ್ಲೂಕಿನ ವಿನಾಯಕ ಸಿದ್ಧಾಪುರ ಪೂಜೇರಿ ಅವರು ಮನೆಯಲ್ಲಿ ಮಲಗಿದ್ದಾಗ ಬಂಡೆ ಕಲ್ಲು ಬಿದ್ದು ಕಾಲು ಕಳೆದುಕೊಂಡಿದ್ದರು. ದೇಹವನ್ನು ಕಾಡಿದ ಗಾಯ ದವಾಖಾನೆಯಿಂದ ಹೊರಗೆ ಬರುವಷ್ಟರಲ್ಲಿ ಇಲ್ಲದಾಯಿತು. ಆದರೆ ಮನಸ್ಸಿನಲ್ಲಿ ಉಳಿದ ನೋವು ಇಳಿಯಲು ಬಹಳಷ್ಟು ಸಮಯ ಬೇಕಾಯಿತು. ಈ ಸಂದರ್ಭದಲ್ಲಿ ಕ್ರೀಡೆಯಲ್ಲಿ ತೊಡಗಿಸಿಕೊಂಡು ಜೀವನೋತ್ಸಾಹವನ್ನು